<u>ದಿವಾಣಿ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಮುಂಡರಗಿ</u>

| | | |
|---|---|---|
| | ದರಕಾಸ್ತು ಸಂಖೆ 56/2019 | |
| | ಆರ್.ಡಬ್ಲೂಃ | 1 |
| | ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 03.02.2026 | |

ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಪಾಟೀ ಸವಾಲುಃ ಶ್ರೀ.ಎಸ್.ಎ.ಕೆ. ವಕೀಲರಿಂದಃ**

1. ಅಸಲು ದಾವಾ ಸಂಖ್ಯೆ 75/2016 ರಲ್ಲಿನ ನಿಪಿ 22 ರಂತೆ ದಾವಾ ಆಸ್ತಿಯಲ್ಲಿರುವ ಕಟ್ಟಡವನ್ನು ದಿಃ 23.06.1997 ರಂದು ಶಂಖು ಸ್ಥಾಪನೆಯನ್ನು ಅಧ್ಯಕ್ಷರಾದ ವಿ.ಹೆಚ್.ಪಾಟೀಲ್ ಇವರ ನೇತೃತ್ವದಲ್ಲಿ ಜರುಗಿಸಲಾಗಿದೆ ಎಂದರೆ ಸರಿ. ಸದರಿ ಶಾಲಾ ಕಟ್ಟಡವನ್ನು ನಿಪಿ 21 ರಂತೆ ದಿಃ 11.12.2000 ರಂದು ನಮ್ಮ ಸಂಸ್ಥೆಯವರು ಉದ್ಘಾಟಿಸಿರುತ್ತಾರೆ ಎಂದರೆ ಸರಿ. ಸದರಿ ವರ್ಷದಿಂದ ಶಾಲೆಯ ಎಲ್ಲ ಚಟುವಟಿಕೆಗಳು ಪ್ರಾರಂಭವಾಗಿರುತ್ತವೆ ಎಂದರೆ ಸರಿ. ಶಾಲೆ ಕಟ್ಟಲು ಸಂಬಂಧಪಟ್ಟ ಇಲಾಖೆಯಿಂದ ಅನುಮತಿ ಪಡೆಯಬೇಕೆಂದರೆ ಸರಿ. ನಮ್ಮ ಸಂಸ್ಥೆಯವರು ನಿಪಿ 23 ರ ಪ್ರಕಾರ ಖರೀದಿ ಹಿಡಿದ 2 ಎಕರೆ 20 ಗುಂಟೆ ಜಮೀನನ್ನು ದಿಃ 25.10.2012 ರಂದು ಶೈಕ್ಷಣಿಕ ಉದ್ದೇಶದಿಂದ ಭೂ ಪರಿವರ್ತಿಸಿರುತ್ತಾರೆ ಎಂದರೆ ಸರಿ. ಶಾಲಾ ಕಟ್ಟಡವನ್ನು ಕಾನೂನು ಬದ್ಧವಾಗಿ ಕಟ್ಟಿಲ್ಲ ಎಂದರೆ ಸಾಕ್ಷಿಯು ಹಿಂದಿನ ಅಧಿಕಾರಿಗಳಿಗೆ ಮಾಹಿತಿ ಇರಬಹುದು, ಈಗ ನನಗೆ ಗೊತ್ತಿಲ್ಲ ಅಂತಾ ನುಡಿಯುತ್ತಾರೆ.

2. ಸಾಮಾನ್ಯವಾಗಿ ಯಾವುದಾದರೂ ಆಸ್ತಿಯನ್ನು ಖರೀದಿಸುವ ಪೂರ್ವದಲ್ಲಿ ಆಸ್ತಿಯ ದಾಖಲಾತಿಯ ಕುರಿತು ಮತ್ತು ಅದರ ಅಸ್ತಿತ್ವದ ಕುರಿತು ಪರಿಶೀಲಿಸಿಯೇ ಖರೀದಿ ಹಿಡಿಯಲಾಗುತ್ತದೆ ಎಂದರೆ ಸರಿ. ಸಂಸ್ಥೆಯವರು ಆಸ್ತಿ ಖರೀದಿಸುವ ಕಾಲಕ್ಕೆ ತೀರ್ಪುದಾರನಿಗೆ ರಿ ಸ ನಂ.115/2 ಕ್ಷೇತ್ರ 21 ಎಕರೆ 17 ಗುಂಟೆ, ಪಿ.ಕೆ.15, ಒಟ್ಟು ಕ್ಷೇತ್ರ 21 ಎಕರೆ 2 ಗುಂಟೆ ಅಂತಾ ಆಸ್ತಿ ಅವರ ಹೆಸರಿಗೆ ನಮೂದು ಇದ್ದು, ಅದರ ಅಸ್ತಿತ್ವದಲ್ಲಿ ಅವರೇ ವಹಿವಾಟು ಹೊಂದಿದ್ದರು ಎಂದರೆ ನನಗೆ ಗೊತ್ತಿಲ್ಲ.

3. ಸದರಿ ಸಂಸ್ಥೆಯವರು ಖರೀದಿ ಹಿಡಿದ 2 ಎಕರೆ 20 ಗುಂಟೆ ಆಸ್ತಿಯ ಪೂರ್ವದ ಕಡೆಗೆ ಘಟ್ಟರಡ್ಡಿಹಾಳ ರಸ್ತೆ ಬರುತ್ತದೆ ಎಂದರೆ ಸರಿ. ಪಶ್ಚಿಮಕ್ಕೆ ಸದರಿ ಸಂಸ್ಥೆಯ ಮಾಲೀಕತ್ವದ ಜಮೀನಿದ್ದು, ಅದನ್ನು ಅವರು ಎನ್ ಎ ಮಾಡಿ, ಮಾರಾಟ ಮಾಡಿದ್ದಾರೆ ಎಂದರೆ ಸರಿ. ಉತ್ತರಕ್ಕೆ ಆರೇರರವರ ಜಮೀನಿದೆ ಎಂದರೆ ಸರಿ. ದಕ್ಷಿಣಕ್ಕೆ ಹೆಗ್ಗಡಾಳರವರ ಪ್ಲಾಟ್ ಮತ್ತು ರಸ್ತೆ ಇದೆ ಎಂದರೆ ಸಾಕ್ಷಿಯು ಅರ್ಧ ರಸ್ತೆ ಇದ್ದು , ಪ್ಲಾಟ್ಗಳಿವೆ ಅಂತಾ ನುಡಿಯುತ್ತಾರೆ.

4. ಈ ನ್ಯಾಯಾಲಯದಿಂದ ರಿ ಸ ನಂ.115 ನ್ನು ಅಳತೆ ಮಾಡಲು ಆಯುಕ್ತರನ್ನು ನೇಮಿಸಿದ್ದು, ಅವರು ಅಲ್ಲಿಗೆ ಅಳತೆ ಮಾಡಲು ಬಂದಾಗ, ಈ ಹಿಂದಿನ ಅಧ್ಯಕ್ಷರಾದ ಹಿರೇಮಠ ಎಂಬುವವರು ಹಾಜರಿದ್ದರು ಎಂದರೆ ಸರಿ. ಸದರಿ ಅಳತೆಯ ವರದಿಯಲ್ಲಿ ನಮ್ಮ ಶಿಕ್ಷಣ ಸಂಸ್ಥೆಯವರು ತೀರ್ಪುದಾರನ 12 ಅಡಿ ಹಾಗೂ ಸರ್ಕಾರಿ

ರಸ್ತೆಯನ್ನು ಸುಮಾರು 3 ಮೀಟರ್ ಒತ್ತುವರಿ ಮಾಡಿರುತ್ತಾರೆ ಅಂತಾ ನಿಪಿ 27 ರಂತೆ ನಮೂದಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಆಯುಕ್ತರು ನೀಡಿದ ವರದಿಯನ್ನು ನೋಡಿದ್ದೇನೆ. ಆದರೆ, ಈಗ ನನಗೆ ನೆನಪಿಲ್ಲ. ನಿಸಿ 1 ರಲ್ಲಿ 4 ಹಿಸ್ಸೆಗಳಾಗಿವೆ ಅಂತಾ ಕಾಣಿಸಲಾಗಿದೆ ಎಂದರೆ ಸರಿ. ಸದರಿ ವರದಿಯನ್ನು ಪ್ರಶ್ನಿಸಿ, ಅಪೀಲ್ ದಾಖಲಿಸಲಾಗಿತ್ತು. ಮೇಲ್ಮನವಿಯಲ್ಲಿ ಹೊಸ ಆಯುಕ್ತರನ್ನು ನೇಮಕ ಮಾಡಲು ನಾವು ಅರ್ಜಿ ಸಲ್ಲಿಸಿದ್ದರ ಕುರಿತು ಹಾಗೂ ಅದು ವಜಾ ಆದ ಕುರಿತು ತಿಳಿದಿದೆ. ಸದರಿ ಆದೇಶದ ವಿರುದ್ಧ ನಾವು ಮಾನ್ಯ ಉಚ್ಛ ನ್ಯಾಯಾಲಯಕ್ಕೆ ಅಪೀಲ್ ದಾಖಲಿಸಿದ್ದು, ಅದು ವಜಾ ಆಗಿದೆ ಎಂದರೆ ಸರಿ. ಸದರಿ ಆದೇಶವನ್ನು ಈವರೆಗೂ ಪ್ರಶ್ನಿಸಿಲ್ಲ. ನ್ಯಾಯಾಲಯವು ಆದೇಶಿಸಿದಂತೆ 12 ಗುಂಟೆ ಜಮೀನಿನ ನಂತರ ನಮ್ಮ ಜಮೀನಾದ 2 ಎಕರೆ 20 ಗುಂಟೆ ಬರುತ್ತದೆ ಎಂದರೆ ಸರಿ ಅಲ್ಲ.

5. ಇದೇ ನ್ಯಾಯಾಲಯದಲ್ಲಿ ಅಸಲು ದಾವಾ ನಂ.132/2023 ಅಂತಾ ತೀರ್ಪುದಾರನ ವಿರುದ್ಧ ದಾವೆ ದಾಖಲಿಸಿದ್ದೇನೆ ಎಂದರೆ ಸರಿ. ಸದರಿ ದಾವೆ ಸಹ ರಿ ಸ ನಂ.115 ಕ್ಕೆ ಸಂಬಂಧಿಸಿದಂತೆ ಇದೆ ಎಂದರೆ ಸರಿ. ಸದರಿ ದಾವೆಯಲ್ಲಿ ಪ್ರತಿವಾದಿಯು ಅಸಲು ದಾವಾ ಸಂಖ್ಯೆ 75/2016 ರಲ್ಲಿ ಕಾಣಿಸಿದ 12 ಗುಂಟೆ ಜಮೀನನ್ನು ದಾವಾ ಆಸ್ತಿಯಾಗಿ ಮಾಡಿ, ಅದನ್ನು ಪ್ರತಿವಾದಿ ಎಂದರೆ ಈ ಅರ್ಜಿಯಲ್ಲಿನ ತೀರ್ಪುದಾರ ಅತೀಕ್ರಮಿಸುತ್ತಿದ್ದು, ಆತನ ವಿರುದ್ಧ ಘೋಷಣಾತ್ಮಕ ಮತ್ತು ನಿರಂತರ ತಾಕೀತು ಆಜ್ಞೆ ಜಾರಿ ಮಾಡುವಂತೆ ಕೋರಿದ್ದೇನೆ ಎಂದರೆ ಸರಿ. ನ್ಯಾಯಾಲಯದ ಆದೇಶವನ್ನು ಪಾಲಿಸಿದರೆ 12 ಗುಂಟೆ ಜಮೀನನ್ನು ಬಿಟ್ಟುಕೊಡಬೇಕಾಗುತ್ತದೆ ಅಂತಾ ನ್ಯಾಯಾಲಯದ ಕಾಲಹರಣ ಮಾಡಲು ಸುಳ್ಳು ಅರ್ಜಿಗಳನ್ನು ಸಲ್ಲಿಸುತ್ತಿದ್ದೇವೆ ಎಂದರೆ ಸರಿ ಅಲ್ಲ. ನಾವು 2 ಎಕರೆ 20 ಗುಂಟೆಗೆ ಮಾತ್ರ ಮಾಲೀಕರಿದ್ದು, ಅತೀಕ್ರಮಣವಾದ 12 ಗುಂಟೆಗೆ ಯಾವುದೇ ರೀತಿ ಸಂಬಂಧ ಇಲ್ಲ ಹಾಗೂ ಅದನ್ನು ನಾವು ತೀರ್ಪುದಾರನಿಗೆ ಬಿಟ್ಟುಕೊಡಲು ಬಾಧ್ಯಸ್ಥಿಕೆ ಹೊಂದಿದ್ದೇನೆ ಎಂದರೆ ಸರಿ ಅಲ್ಲ.

ಮರು ಪಾಟೀ ಸವಾಲು ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)
ಓ ಹೇ ಕೆ ಸರಿ ಇದೆ.

ದಿವಾಣಿ ನ್ಯಾಯಾಧೀಶರು ಹಾಗೂ ಜೆಎಂಎಫ್‌ಸಿ
ಮುಂಡರಗಿ.